ಆ) ಬೆಳೆ ಹಾನಿಯು ಬೀಜದ ದೋಷದಿಂದ ಅಲ್ಲವಾದ್ದರಿಂದ ಕ್ರಮ ಜರುಗಿಸಿರುವುದಿಲ್ಲ. ಅಲ್ಲದೆ ಬೀಜ ಕಾಯ್ದೆ 1966ರನ್ವಯ ಪರಿಹಾರ ನೀಡಲು ಅವಕಾಶವಿರುವುದಿಲ್ಲ. ಆದರೆ ಕಳಪೆ ಬೀಜದಿಂದ ಬೆಳೆ ನಷ್ಟವಾಗಿರುವ ಪ್ರಕರಣಗಳಲ್ಲಿ ರೈತರಿಗೆ ಗ್ರಾಹಕರ ವೇದಿಕೆ ಮೂಲಕ ಪರಿಹಾರ ಪಡೆಯಲು ಅವಕಾಶವಿದೆ. ಈ ಬಗ್ಗೆ ಇಲಾಖೆಯಿಂದ ಎಲ್ಲಾ ನೆರವು ನೀಡಲಾಗುವುದು.

ಇ) ರೈತರಿಗೆ ಗುಣಮಟ್ಟ ಬೀಜ ಒದಗಿಸಲು ಕೇಂದ್ರ ಸರ್ಕಾರ ರೂಪಿಸಿರುವ ಬೀಜ ಕಾಯ್ದೆಗಳಡಿಯಲ್ಲಿ 1232 ಬೀಜ ಪರಿವೀಕ್ಷಕರುಗಳನ್ನು ಪ್ರಕಟಗೊಳಿಸಲಾಗಿದೆ. ಇವರುಗಳು ಹಂಗಾಮು ಪ್ರಾರಂಭಕ್ಕೆ ಮುಂಚಿತವಾಗಿ ಹಾಗೂ ನಂತರ ಬಿತ್ತನೆ ಬೀಜಗಳ ಮಾದರಿಗಳನ್ನು ಸಂಗ್ರಹಿಸಿ ಬೀಜ ಪರೀಕ್ಷಾ ಪ್ರಯೋಗಾಲಯಗಳಿಗೆ ವಿಶ್ಲೇಷಣೆಗಾಗಿ ಕಳುಹಿಸಲಾಗುತ್ತದೆ. ವಿಶ್ಲೇಷಣೆಯಲ್ಲಿ ಬೀಜ ಮೊಳೆಯುವಿಕೆ ಪ್ರಮಾಣ ಕಡಿಮೆ ಎಂದು ಕಂಡು ಬಂದಲ್ಲಿ ತಪ್ಪಿತಸ್ಥರ ವಿರುದ್ಧ ಕಾನೂನು ಹಾಗೂ ಆಡಳಿತಾತ್ಮಕ ಕ್ರಮ ಜರುಗಿಸಲಾಗುತ್ತದೆ.

555(703) ಶ್ರೀ ಕೃಷ್ಣಪಾಲೇಮಾರ್ ಕೆ. (ಸುರತ್ಕಲ್) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸುರತ್ಕಲ್ ಕ್ಷೇತ್ರದ ಸುರತ್ಕಲ್, ಕಾವೂರ್, ಪಡೀಲ್, ಕೊಳ್ಳೂರು, ಬಜ್ಪೆ ಮತ್ತು ಬೈಕಂಪಾಡಿಗಳಲ್ಲಿ ಸುಸಜ್ಜಿತ ಮಾರ್ಕೆಟ್ ನಿರ್ಮಾಣದ ಕುರಿತು ಸರ್ಕಾರ ಯೋಜನೆ ರೂಪಿಸಿದೆಯೇ;

ಆ) ಹೌದಾದಲ್ಲಿ, ಅದರ ವಿವರಗಳೇನು;

ಇ) ಈ ಮಾರ್ಕೆಟ್‌ಗಳನ್ನು ಯಾವಾಗ ನಿರ್ಮಿಸಿಕೊಡಲಾಗುವುದು?

ಶ್ರೀ ಪ್ರಕಾಶ್ ಬಾ. ಹುಕ್ಕೇರಿ (ಕೃಷಿ ಮಾರುಕಟ್ಟೆ ಸಚಿವರು)

ಅ) ಆರ್.ಐ.ಡಿ.ಎಫ್– Xರ ಯೋಜನೆಯಡಿಯಲ್ಲಿ ಸುರತ್ಕಲ್ ವ್ಯಾಪ್ತಿಯಲ್ಲಿನ ಸುರತ್ಕಲ್‌ನಲ್ಲಿ ಗ್ರಾಮೀಣ ಸಂತೆಯನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಸುರತ್ಕಲ್ ಕ್ಷೇತ್ರದ ವ್ಯಾಪ್ತಿಯಲ್ಲಿ ಬೈಕಂಪಾಡಿಯಲ್ಲಿ ಈಗಾಗಲೇ ಮಾರುಕಟ್ಟೆ ಪ್ರಾಂಗಣವನ್ನು ಅಭಿವೃದ್ಧಿ ಪಡಿಸಲಾಗಿದೆ.

ಆ, ಇ) ಈ ಸದರಿ ಗ್ರಾಮೀಣ ಸಂತೆಯನ್ನು ಆರ್.ಐ.ಡಿ.ಎಫ್–Xರ ಯೋಜನೆಯ ಕಾಲಮಿತಿಯೊಳಗಾಗಿ ಅಭಿವೃದ್ಧಿ ಪಡಿಸಲಾಗುವುದು.

556(704) ಶ್ರೀ ಕೃಷ್ಣಪಾಲೇಮಾರ್ ಕೆ. (ಸುರತ್ಕಲ್) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷಿ ಕ್ಷೇತ್ರದಲ್ಲಿ ಬೀಜ ತಂತ್ರಜ್ಞಾನ ಅಭಿವೃದ್ಧಿಗಾಗಿ ಸರಕಾರ ಹಮ್ಮಿಕೊಂಡ ಕ್ರಮಗಳೇನು;

ಆ) ಕೃಷಿಯಲ್ಲಿ ಮೂಲಭೂತವಾಗಿ ಬೇಕಾಗಿರುವ ಬೀಜಗಳಿಂದ ಕೃಷಿ ಉತ್ಪಾದನೆ ಹೆಚ್ಚಾಗುವುದರಿಂದ ಆ ಕುರಿತು ನಿರ್ಧಾರಿತ ಕಾರ್ಯಕ್ರಮಗಳು ಅವಶ್ಯಕವಲ್ಲವೆ;